ವರ್ಷ	ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ
2008–09	88
2009–10	123
2010–11	81

ಇ) 31 ಡಿಸೆಂಬರ್ 2010ಕ್ಕೆ, 4 ತಿಂಗಳು ಕಳೆದಿರುವ ಪ್ರಕರಣಗಳ ಸಂಖ್ಯೆ 5.

ಪ್ರಸ್ತುತ ಸದರಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿರುತ್ತದೆ.

ನಿವೇಶನ ಹಂಚಿಕೆ

374 (136) ಶ್ರೀ ವಸಂತ ಬಂಗೇರ .ಕೆ (ಬೆಳ್ತಂಗಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ನಿವೇಶನ ರಹಿತರಿಗಾಗಿ ನಿವೇಶನಗಳನ್ನು ಕಾದಿರಿಸಿದ್ದರೂ ಹತ್ತಾರು ವರ್ಷಗಳಿಂದ ನಿವೇಶನಗಳ ಹಕ್ಕು ಪತ್ರಗಳನ್ನು ವಿತರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಎಷ್ಟು ಎಕರೆ ಜಾಗವನ್ನು ನಿವೇಶನಕ್ಕಾಗಿ ಕಾದಿರಿಸಲಾಗಿದೆ ಮತ್ತು ಸದರಿ ಜಾಗದಲ್ಲಿ ಎಷ್ಟು ನಿವೇಶನಗಳು ಲಭ್ಯವಿರುತ್ತವೆ ; (ಪಂಚಾಯತ್‌ವಾರು ವಿವರ ನೀಡುವುದು)

ಇ) ಈ ಸದರಿ ನಿವೇಶನಗಳನ್ನು ಅರ್ಹರಿಗೆ ಯಾವಾಗ ವಿತರಿಸಲಾಗುವುದು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಇಲ್ಲ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಳೆದ 10 ವರ್ಷಗಳಿಂದ ನಿವೇಶನ ರಹಿತರಿಗೆ ವಿತರಿಸಿದ ಹಕ್ಕು ಪತ್ರಗಳ ವಿವರ ಈ ಕೆಳಗಿನಂತೆ ಇರುತ್ತದೆ.

ತಾಲ್ಲೂಕು	ವರ್ಷ	ವಿತರಿಸದ ಹಕ್ಕು ಪತ್ರಗಳು
ಬೆಳ್ತಂಗಡಿ	2001–02	343
	2002–03	504
	2003–04	–

ತಾಲ್ಲೂಕು	ವರ್ಷ	ವಿತರಿಸದ ಹಕ್ಕು ಪತ್ರಗಳು
	2004–05	69
	2005–06	35
	2006–07	14
	2007–08	–
	2008–09	307
	2009–10	–
	2010–11	–
	ಒಟ್ಟು	**1272**

ಆ) ಬೆಳ್ತಂಗಡಿ ತಾಲ್ಲೂಕಿನಲ್ಲಿ ನಿವೇಶನ ಹಂಚಿಕೆಗೆ 25.07 ಎಕರೆ ಕಾಯ್ದಿರಿಸಲಾಗಿದ್ದು, ಎಲ್ಲಾ ಜಮೀನು ಹಂಚಲಾಗಿರುತ್ತದೆ. ಹಾಲಿ ಹಂಚಲು ನಿವೇಶನ ಲಭ್ಯವಿರುವುದಿಲ್ಲ.

ಇ) ಉತ್ತರದ "ಆ" ಭಾಗದಲ್ಲಿ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆದಾಯ ದೃಢೀಕರಣ ಪತ್ರವನ್ನು ಗಣಕ ಯಂತ್ರದ ಮೂಲಕ ನೀಡುವುದು

375 (137) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮಂದಿಯ ಆದಾಯ ದೃಢೀಕರಣ ಪತ್ರವನ್ನು ಗಣಕಯಂತ್ರದ ಮೂಲಕ ನೀಡಲು ವ್ಯವಸ್ಥೆಗೊಳಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

ಆ) ಬಿ.ಪಿ.ಎಲ್. ಪಡಿತರ ಚೀಟಿ ಹೊಂದಿರುವವರಿಗೆ ಗಣಕೀಕೃತ ಆದಾಯ ದೃಢೀಕರಣ ಪತ್ರದಲ್ಲಿ 15–30 ಸಾವಿರ ರೂ. ವಾರ್ಷಿಕ ಆದಾಯ ನಮೂದಿಸಿರುವುದರಿಂದ ನೂರಾರು ಬಡವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಈ ತೊಂದರೆಯನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುವುದು;